ಒ ಎಸ್ 115/2022 ಪಿ.ಡಬ್ಲ್ಯೂ: 1

ಇಂದು ದಿ: 19.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ವಕೀಲರಿಂದ:

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಚಾರಗಳು ಗೊತ್ತು. ನಾನೇ ವಿವರಗಳನ್ನು ಕೊಟ್ಟಿರುತ್ತೇನೆ. ಆಸ್ತಿಯಲ್ಲಿ ನನಗೂ ಭಾಗ ಬರಬೇಕು ಎಂದು ದಾವೆ ಸಲ್ಲಿಸಿದ್ದೇನೆ. ಕೆಲವೊಂದು ಸರ್ವೆ ನಂಬರ್ ಗಳು ನನಗೆ ಗೊತ್ತು. ಆ ಪೈಕಿ 309, 266 ಗೊತ್ತು. ಬಾಕಿ ಇದ್ದ ಆಸ್ತಿಗಳ ಬಗ್ಗೆ ಅಷ್ಟೊಂದು ಗೊತ್ತಿಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿಗಳು ಗೊತ್ತಿಲ್ಲ. ನಾನು ಮದುವೆಯಾಗಿ ಒಂದು, ಒಂದುವರೆ ವರ್ಷ ಚೆನ್ನಾಗಿದ್ದೆ ಎಂದರೆ ಸರಿ. ನಂತರ ಅವರ ಜೊತೆ ವಿನಾ ಕಾರಣ ಜಗಳ ತೆಗೆದು ಅವರಿಗೆ ಹಿಂಸೆ ನೀಡಲು ಪ್ರಾರಂಭಿಸಿದೆ ಎಂದರೆ ಸುಳ್ಳು. ಆ ಕಾರಣಕ್ಕೆ ಮನ ನೊಂದು ಆತ್ಮಹತ್ಯೆ ಮಾಡಿಕೊಂಡರು ಎಂದರೆ ಸುಳ್ಳು. 10-16 ದಿನಗಳವರೆಗೆ ನನ್ನ ಗಂಡ ಆಸ್ಪತ್ರೆಯಲ್ಲಿ ಇದ್ದಾಗಲೂ ನಾವು ನೋಡಲು ಹೋಗಿಲ್ಲ ಎಂದರೆ ಸರಿಯಲ್ಲ, ನಾನು ನನ್ನ ತಂದೆ ಹೋಗಿದ್ದೆವು ಎನ್ನುತ್ತಾರೆ. ನಂತರ ನಾನು ನನ್ನ ತಂದೆ ಮನೆಗೆ ಹೋದೆ ಎಂದರೆ ನಾನು ಮನೆಗೆ ಹೋದ ನಂತರ ಆ ರೀತಿ ಮಾಡಿಕೊಂಡರು ಎನ್ನುತ್ತಾರೆ.

ನನ್ನ ಗಂಡ ಬದುಕಿರುವಾಗಲೇ ದಾವಾ ಆಸ್ತಿಗಳು ಮೌಖಿಕವಾಗಿ ವಿಭಾಗವಾಗಿದ್ದವು ಎಂದರೆ ಸುಳ್ಳು. ಆ ಮೌಖಿಕ ವಿಭಾಗದ ಪೈಕಿ ಸರ್ವೆ ನಂ.266 ರಲ್ಲಿ 2 ಎಕರೆ 38 ಗುಂಟೆ ಪೈಕಿ ನನ್ನ ಗಂಡನಿಗೆ 2 ಎಕರೆ ಆಸ್ತಿ ಬಂದಿತ್ತು ಎಂದರೆ ಸುಳ್ಳು. ಉಳಿಕೆ 38 ಗುಂಟೆ ಜಮೀನು ಈ ದಾವೆಯ 4ನೇ ಪ್ರತಿವಾದಿಗೆ ಬಂತು ಎಂದರೆ ಸುಳ್ಳು. ವಿಭಾಗದಲ್ಲಿ ಬಂದ ಆಸ್ತಿಯಲ್ಲಿ ಈವರೆಗೂ ನಾನೇ ಸ್ವಾಧೀನದಲ್ಲಿದ್ದುಕೊಂಡು ವ್ಯವಸಾಯ ಮಾಡಿಕೊಂಡು ಬಂದಿದ್ದೇನೆ ಎಂದರೆ ಸುಳ್ಳು. ಆ ಜಮೀನಿನಲ್ಲಿ ಇದ್ದ ಮರಗಳನ್ನು ಸಹ ನಾನೇ ತೆಗೆಸಿದ್ದೆ ಎಂದರೆ ಸರಿಯಲ್ಲ. ದಾವಾ ಕ್ರಮ ಸಂ.4ರ ಜಮೀನನ್ನು ಈ ದಾವೆಯ 1ನೇ ಪ್ರತಿವಾದಿ ಸ್ವಂತ ದುಡಿಮೆಯಿಂದ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಕ್ರಮ ಸಂ.2, 5 ಮತ್ತು 6 ರ ಆಸ್ತಿಗಳು ಈ ದಾವೆಯ 1ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಪಾಲಿಗೆ ಬಂದ ಆಸ್ತಿಗಳು ಎಂದರೆ ಸುಳ್ಳು. 1ನೇ ಅನುಕ್ರಮ ಆಸ್ತಿ ಸರ್ವೆ ನಂ.265 ರಲ್ಲಿ 2ನೇ ಪ್ರತಿವಾದಿಗೆ ಬಂತು ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.